DOC-27
T-P-2

(1)

R No KRNN 12 ಲ 10 - 4 - 74



ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಶ್ರೀ ಶಾಂತವೀರ ಎಂ. ಎಸ್ ಕೃಷ್ಣರಾವ್ (3 ಸ.ಸ

ಪ್ರಜಾ ಪಭುತ್ವದಿಂದ ಮಾತ್ರ ಪ್ರಗತಿ

ನರಬಲಿ

ಜಾಬಲಪುರ— ರೊಢಾಡಿ ಗ್ರಾಮದ ಒಬ್ಬ ಮಾಜಿ ಸೈನಿಕ ರೂಪಚಂದ್ ಜೂಜಾಟದಲ್ಲಿ ತುಂಬಾ ಕಳೆದುಕೊಂಡಿದ್ದು, ಅವ್ಯಪ್ತ ಸಿರಿಯಲೆಂಬ ಆಶೆಯಿಂದ ತನ್ನ 18 ತಿಂಗಳ ಮಗುವನ್ನು ಕತ್ತರಿಸಿ ರಕ್ತವನ್ನು ಶಾರದಾ ಪಠಕ್ಕೆ ಅರ್ಪಿಸಿ ಮಾಡಿದನು – ಈ ಕಾರ್ಯ ನಡೆಸಿದಾಗ ಆತನ ಹೆಂಡತಿ ಮತ್ತು ತಾಯಿ ಮನೆಯಲ್ಲಿ ಇರಲಿಲ್ಲ – ಖೂನಿಗಾಗಿ ಅವನನ್ನು ದಸ್ತಗಿರಿ ಮಾಡಲಾಗಿದೆ.

ಮಂತ್ರಿಮಂಡಲ ರಾಜೀನಾಮೆಗೆ ಒತ್ತಾಯ

ಪಾಟ್ನಾ— ಶಾಸನಸಭೆಯಲ್ಲಿ ವಿರೋಧ ಸದಸ್ಯರು ವೇದಿಕೆ ಮುತ್ತಿ, ಸಭೆಯ ವಿಸರ್ಜನೆಗೆ, ಮಂತ್ರಿಮಂಡಲ ರಾಜೀನಾಮೆಗಾಗಿ ಘೋಷಣೆ ಮಾಡುತ್ತಾ ಸಭೆ ನಡೆಯದಂತಾಗಲು ಗೌರ್ನರರು ಸಭೆಯನ್ನು ಉದ್ದೇಶಿಸಿ ಮಾಡಿದರು.

ಅಖಿಲ ಭಾರತ ಜನಪ್ರಿಯ ಸ್ಪರ್ಧೆ

ಪ್ರವೇಶ ಶುಲ್ಕ ಇಲ್ಲ — ನೀವು ಒಂದು ಬಹುಮಾನ ಗಳಿಸಲೇಬೇಕು

ಸಹಾಯಕ್ಕೆ ಮಾದರಿ ಪತ್ತೆ 36

11	10	15
16	12	8
9	14	13

ಮೊದಲನೆ ಬಹುಮಾನ : ವೆಸ್ಪ ಸ್ಕೂಟರ್ ಅಥವಾ ಟೆಲಿವಿಷನ್ ಅಥವಾ ರೆಫ್ರಿಜರೇಟರ್. 2 ನೇ ಬಹುಮಾನ : ಒಂದು ಟೇಪ್ ರೆಕಾರ್ಡರ್ ಅಥವಾ ಆಟೋಮ್ಯಾಟಿಕ್ ಕ್ಯಾಮರಾ 3 ನೇ ಬಹುಮಾನ : (100) ಯಾಷಿಕ ಜಪಾನ್ ಮಾದರಿ 4 ಬ್ಯಾಂಡ್ ಆಲ್ ವರ್ಲ್ಡ್ ಟ್ರಾನ್ಸಿಸ್ಟರ್ ಬೆಲೆ ರೂ. 275/– ಇವರ ಅರ್ಧ ಬೆಲೆ ಮೇರೆ. ಪ್ರತಿ ಕುಟುಂಬಕ್ಕೆ ಜೀವನಾವಧಿ ಕಾಣಿಕೆ.

ಪ್ರೇರಕರ ತೀರ್ಮಾನ ಕಡೆಯದು

ಖಾಲಿ ಚೌಕ್ಕಗಳಲ್ಲಿ 9 (ಒಂಬತ್ತು) ರಿಂದ 17 (ಹದಿನೇಳು) ರವರೆಗೆ ಸಂಖ್ಯೆಗಳನ್ನು ಉಪಯೋಗಿಸಿರಿ ಅವನ್ನು ಮೇಲಿನಿಂದ ಕೆಳಗೆ, ಅಡ್ಡಲಾಗಿ, ಮೂಲೆಯಿಂದ ಕೂಡಿದಲ್ಲಿ ಪತ್ತೆ 39 (ಮೂವತ್ತೊಂಬತ್ತು) ಆಗಬೇಕು. ಒಂದು ಸಂಖ್ಯೆಯನ್ನು ಒಂದು ಬಾರಿ ಮಾತ್ರ ಉಪಯೋಗಿಸಬೇಕು. ಪ್ರವೇಶಗಳಿಗೆ ಖಾಲಿ ಕಾಗದ ಉಪಯೋಗಿಸಬೇಕು. ಬಹುಮಾನ ಗಳಿಸಿದವರು ಅಂಚೆವೆಚ್ಚ, ಪ್ಯಾಕಿಂಗ್ ಮತ್ತು ಲೈಸನ್ಸ್ ಶುಲ್ಕ ಕೊಡಬೇಕು. ಇಂಗ್ಲೀಷ್ ಅಥವಾ ಹಿಂದಿಯಲ್ಲಿ ಪ್ರವೇಶಗಳನ್ನು ಕಳುಹಿಸಬೇಕು ಫಲಿತಾಂಶಕ್ಕಾಗಿ 45 ಪೈಸೆ ಸ್ಟಾಂಪ್ ಕಳುಹಿಸಬೇಕು. ಕಡೇ ತಾರೀಖು 5-5-74 ಫಲಿತಾಂಶ ತಾರೀಖು 7-5-74

Dire tor — BAJAJ ENTERPRISES
P O Box No. 1264 DELHI-6

ಎನ್. ಜಿ ಓ ಮುಷ್ಕರ

ಬೆಂಗಳೂರು— ನಿನ್ನೆ ಎನ್. ಜಿ. ಓ ಮುಷ್ಕರ ಯಶಸ್ವಿಯಾಗಿ ನಡೆಯಿತು.

★

ಜಯಪ್ರಕಾಶನಾರಾಯಣರಿಗೆ ಬೆಂಬಲ

ಹುಬ್ಬಳ್ಳಿ ಆಡಳಿತದಲ್ಲಿ ಮತ್ತು ಭ್ರಷ್ಟಾಚಾರ ಅಡೆತಡೆಗಳನ್ನು ಉರುಳಿಸುವ ಶ್ರೀ ಜಯಪ್ರಕಾಶನಾರಾಯಣರ ಅಭಿಪ್ರಾಯಕ್ಕೆ ತನ್ನ ಪೂರ್ಣ ಬೆಂಬಲವನ್ನು ಅಖಿಲ ಭಾರತ ಮುಸ್ಲಿಂ ಲೀಗ್ ಅಧ್ಯಕ್ಷ ಶ್ರೀ ಇಬ್ರಾಹಿಂ ಸುಲೇಮಾನಿ ಸೇಟ್ ರವರು ನೀಡಿರುವರು.

★

ಮುಖ್ಯಮಂತ್ರಿಗಳಿಗೆ ಸತ್ಕಾರ

ಹಾಸನ— ಬೇಲೂರಿನಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಸ್ಕೀಂಗೆ ಶಂಕುಸ್ಥಾಪನೆ ಮಾಡುತ್ತಾ, ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು, ಪ್ರಜಾಪ್ರಭುತ್ವ ಸರಕಾರ ಮೂಲಕ ಮಾತ್ರ ದೇಶವು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೊಳ್ಳುವುದೆಂದು ಹೇಳಿದರು ; ಹಲವಾರು ಪ್ರತಿಕೂಲ ಪರಿಸ್ಥಿತಿಗಳೊದಗಿದ್ದರೂ ರಾಜ್ಯದ ಆದಾಯ ರೂ. 374 ಕೋಟಿಗೆ ಹೆಚ್ಚಿರುವುದೆಂದು ಹೇಳಿದರು ; ಬೇಲೂರಿನಲ್ಲಿ ಪ್ರವಾಸಿಕರಿಗೆ ಹೆಚ್ಚು ಸೌಕರ್ಯ ಒಗಿಸಲು ಸರಕಾರ ಯೋಚಿಸಿರುವುದೆಂದು ಹೇಳಿದರು – ಮುಖ್ಯಮಂತ್ರಿಗಳ ಗೌರವಾರ್ಥ ಸತ್ಕಾರ ಸಮಾರಂಭ ಏರ್ಪಡಿಸಲಾಗಿತ್ತು ; ಅವರನ್ನು ದೇವಸ್ಥಾನಕೆ ವೈರವಣಿಗೆಯಲ್ಲಿ ಕರೆದುಕೊಂಡು ಹೋಗಲಾಯಿತು; ಬಿನ್ನವತ್ತಳೆ ಅರ್ಪಿಸಲಾಯ್ತು

★

ದಿನ್ಯೆವಾಣಿ

ಹೆಂಗಸರ ವಿಷಯದಲ್ಲಿ ಅವಿವಾಹಿತರು ವಿವಾಹಿತರಿಗಿಂತ ಹೆಚ್ಚು ಬಲ್ಲರು ; ಇಲ್ಲದಿದ್ದರೆ ಅವರೂ ವಿವಾಹವಾಗುತ್ತಿದ್ದರು

— ಹೆಚ್ ಎಲ್ ಮೆನ್ಕೆನ್

ಸರಕಾರ ವಹಿಸಿಕೊಳ್ಳುವುದಿಲ್ಲ

ನವದೆಹಲಿ— ಸೀಮೆಎಣ್ಣೆ ಸಗಟು ವ್ಯಾಪಾರವನ್ನು ವಹಿಸಿಕೊಳ್ಳುವ ಯೋಚನೆ ಸರಕಾರಕ್ಕಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಕ್ಷಮಾಪಣೆ

ನವದೆಹಲಿ– ತ್ರಿಪಕ್ಷಗಳ ಒಪ್ಪಂದದಲ್ಲಿ ವಿಚಾರಣೆಗೊಳಗಾಗಿದ್ದ 195 ಪಾಕ್ ಯುದ್ಧ ಖೈದಿಗಳಿಗೆ ಕ್ಷಮಾಪಣೆ ನೀಡುವ ತೀರ್ಮಾನವನ್ನು ಭಾರತ, ಪಾಕಿಸ್ತಾನ, ಬಂಗ್ಲಾದೇಶದ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ಕೈಗೊಳ್ಳಲಾಯಿತು.

★

ನಿವೇಶನ ಹಂಚಿಕೆಯಲ್ಲಿ ಗೋಳು

ನವದೆಹಲಿ ದಕ್ಷಿಣ ಡೆಲ್ಲಿ ಕಾಲನಿಯಲ್ಲಿ ನಿವೇಶಗಳನ್ನು ವಿ ಐ ಪಿ ಗಳಿಗೂ ಅವರ ಸಂಬಂಧೀಕರಿಗೂ ಹಂಚಿರುವ ಬಗ್ಗೆ ಲೋಕಸಭೆಯ ಜನಸಂಘ ನಾಯಕ ಶ್ರೀ ವಾಜಪೇಯಿಯವರು ಟೀಕಿಸಿದರು – ಶ್ರೀ ಜ್ಯೋತಿರ್ಮಾಯಿ ಬಸುರವರು, ಇದಕ್ಕೆ ಸಂಬಂಧಿಸಿದಲೆ ॥ ಗೌರ್ನರರನ್ನು ಸಸ್ಪೆಂಡು ಮಾಡಿ ತಮ್ಮ ಅಧಿಕಾರ ದುರುಪಯೋಗಿಸಿರುವ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ಕೇಳಿಕೆಹಾಕಿದರು.

★

ಜಯಪ್ರಕಾಶನಾರಾಯಣರ ಪ್ರತಿಜ್ಞೆ

ಪಾಟ್ನಾ— ಈಗಿನ ಪರಿಸ್ಥಿತಿಯು ಸಹಿಸಲಸಾಧ್ಯವಾಗಿರುವುದರಿಂದ ಅದರ ಬದಲಾವಣೆಗೆ ಶ್ರೀ ಜಯಪ್ರಕಾಶನಾರಾಯಣರು ಪ್ರತಿಜ್ಞೆ ಮಾಡಿದರು ; ಗಾಂಧಿ ಮೈದಾನದಲ್ಲಿ ಪ್ರಚಂಡ ಸಭೆಯಲ್ಲಿ ಪ್ರಸ್ತುತ ಬೆಲೆ ಏರಿಕೆಗೆ ಪ್ರಧಾನಿ ಇಂದಿರಾರವರ ಆರ್ಥಿಕ ನೀತಿಯೇ ಕಾರಣವೆಂದು ಹೇಳಿದರು – ತನುಗೇನೂ ರಾಜಕೀಯ ಆಕಾಂಕ್ಷೆಯಿಲ್ಲವೆಂದೂ, ಅದಕ್ಕಾಗಿಯೇ ತಾವು ಚುನಾವಣೆಯಲ್ಲಿ ಭಾಗವಹಿಸಿದಲ್ಲವೆಂದೂ ಹೇಳಿದರು – ನೈತಿಕ ಕ್ರಾಂತಿ ಅವಶ್ಯಕವೆಂದು ಹೇಳಿದರು

ಕಳ್ಳ ಪೋಲೀಸ್

ಫ್ರಾನ್ಸಿನ ನೈಸ್ ನಗರದಲ್ಲಿ ಈಚೆಗೆಕಳ್ಳತನ ಮಾಡಿದ ಆರು ಮಂದಿಗೆ ಶಿಕ್ಷೆ ವಿಧಿಸಲಾಯೀತು.

ಕಾಗದ ಬರೆಯುವದಕ್ಕೆ ದಾಖಲೆ

ಪಶ್ಚಿಮ ಜರ್ಮನಿಯ ಶಾಲಾ ಬಾಲಕ ಥಾಮಸ್ ನೀಹಾಸ್ ಇತ್ತೀಚೆಗೆ ಕಾಗದ ಬರೆಯುವದರಲ್ಲಿ ಹೊಸ ವಿಶ್ವ ದಾಖಲೆ ಸ್ಥಾಪಿಸಿದ್ದಾನೆ; ಎರಡು ವರ್ಷಗಳ ಹಿಂಬೆ ಅವನು ಒಂದು ರೋಲ್ ಕಾಗದದ ಮೇಲೆ ತಂದೆತಾಯಿಗಳಿಗೆ ಮತ್ತು ಸೋದರಿಯರಿಗೆ ಕಾಗದ ಬರೆಯುಲು ಪ್ರಾರಂಭಿಸಿದ ; ಅದನ್ನು ಮುಗಿಸಿದಾಗ ಅದು 1223 ಮಾಟರು ಉದ್ದವಾಗಿತ್ತು ; ಇದಕ್ಕೆ ಹಿಂದಿನ ದಾಖಲೆ 103 ಮಾಟರು ಗಳಾಗಿತ್ತು.

ವ್ಯರ್ಥ ಪ್ರಯತ್ನ

ಅಮೇರಿಕಾದ ಸೆಂಟ್ರಲ್ ಇಂಟೆಲಿಜನ್ಸ್ ಏಜೆನ್ಸಿ (ಸಿಐಬಿ) ಸಾಕು ಪ್ರಾಣಿಗಳ ದೇಹಕ್ಕೆ ಗೂಢಚರ್ಯೆ ಉಪಕರಣಗಳನ್ನು ಜೋಡಿಸಲು ನೂರಾರು ಸಹಸ್ರ ಡಾಲರುಗಳನ್ನು ಖರ್ಚು ಮಾಡಿತು ; ಅದೆಲ್ಲಾ ವ್ಯರ್ಥವಾಯಿತು ನಾಯಿಗಳು ಬೆಕ್ಕುಗಳು ತಮ್ಮ ಯಜಮಾನರುಗಳ ಜೊತೆ ಗಾಳಿಸೇವನೆಗೆ ಹೋದಾಗ ನಡೆಸುವ ಮಾತುಕತೆಗಳನ್ನು ಸಂಗ್ರಹಿಸುವದು ಸಿಐಏ ಉದ್ದೇಶವಾಗಿತ್ತು; ಈ ವ್ಯವಸ್ಥೆಯ ವಿಫಲತೆಯನ್ನು ಕುರಿತು ವಿಲ್ಸರ್ ಮಾರ್ಗೆಟ್ಸ್ ಮತ್ತು ಜಾನ್ ಮಾರ್ಕ್ಸ್ ಸಿಐಏ ಗೂಢಚರ್ಯೆ ಕುರಿತು ತಾವು ಬರೆದಿರುವ ಪುಸ್ತಕದಲ್ಲಿ ವಿವರಿಸಿದ್ದಾರೆ.

ಅಹರ್ ಅಭ್ಯರ್ಥಿ

ಅಮೇರಿಕದ ಮೆಯ್ನಿನ್ ಗೌರ್ನರ್ ಸ್ಥಾನಕ್ಕೆ ಅಭ್ಯರ್ಥಿಯಾಗಲು ಮುವತ್ತೈದು ವರ್ಷದ ದಾಸ್ಟಿಟ್ಯೂಸ್ಕೆಗೆ ಅನುಮತಿ ನೀಡಲಾಗಿದೆ ; ದರೋಡೆ ಅಪಾದನೆಗಾಗಿ ಆತ ಈಗ ದೀರ್ಘಾವಧಿ ಶಿಕ್ಷೆಗೆ ಗುರಿಯಾಗಿ ಕಾರಾಗೃಹದಲ್ಲಿದ್ದಾನೆ. ಚುನಾವಣೆಯಲ್ಲಿ ತಾನು ಜಯಗಳಿಸಿದಲ್ಲಿ ತನ್ನ ಬಿಡುಗಡೆಗಾಗಿ ಪದವಿಯನ್ನು ಉಪಯೋಗಿಸಿಕೊಳ್ಳುವುದಿಲ್ಲವೆಂದು ಆಶ್ವಾಸನೆ ನೀಡಿದ್ದಾನೆ. ನಾನು ಡೆಮೊಕ್ರಾಟ್ ಅಲ್ಲ, ರಿಪಬ್ಲಿಕನ್ ಅಲ್ಲ, ಹೊಸ ಪಕ್ಷವನ್ನು ಸ್ಥಾಪಿಸುತ್ತೇನೆ ಎಂದು ಅವನು ಹೇಳಿದ್ದಾನೆ.

ದಿವ್ಯವಾಣಿ

ನೀವು ಯಜಮಾನರಾಗಿದ್ದರೆ ಕೆಲವು ಸಾರಿ ಕುರುಡರಾಗಿರಿ, ನೀವು ಸೇವಕರಾಗಿದ್ದರೆ ಕೆಲವು ಸಾರಿ ಕಿವುಡಾಗಿರಿ. — ಪುಲ್ಲರ್

For Holdalls, Kit Bags, & Suit Cases

ಹೋಲ್ಡ್ ಆಲ್, ಕಿಟ್ ಬ್ಯಾಗ್, ಸೂಟ್‌ಕೇಸುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

Fair Price Shop in Actual Practice

ಪೂರ್ಣ ನಿಶ್ಶೇಧವಾಗಲಿ

Protect the Cow

Help The Gorakshana

— Humanitarian Propoganda Monthly —

Contribute Liberally

to the National Defence Fund.

ವುಡ್‌ಲಾಂಡ್ಸ್ 5 4 74 ರಿಂದ

ಅಮೋಘ 2 ನೇ ವಾರ

ರಿಕ್‌ಷಾವಾಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ಅಪೆರಾ 12 4 74 ರಿಂದ

ಕರುಳಿನ ಕರೆ

ಪಾತ್ರ – ರಾಜಕುಮಾರ್ ಕಲ್ಪನ ಒಂದು ವಾರ ಮಾತ್ರ

ಅಮೋಘ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore